# ಏಕೆನ್ನ ಈ ರಾಜ್ಯಕ್ಕೆಳೆತಂದೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 124.
2. **Note:** This song is not available in other standard books that I referred.
3. **Note:** Singer has followed these lyrics.

ರಾಗ: ಕಾಂಭೋಜಿ ತಾಳ: ಝಂಪೆ

ಏಕೆನ್ನ ಈ ರಾಜ್ಯಕ್ಕೆಳೆತಂದೆ ಹರಿಯೆ
ಸಾಕಲಾರದೆ ಎನ್ನನೇಕೆ ಪುಟ್ಟಿಸಿದೆ || ಪ ||

ಎನ್ನ ಕುಲದವರಿಲ್ಲ ಎನಗೊಬ್ಬ ಹಿತರಿಲ್ಲ
ಮನ್ನಿಸುವ ದೊರೆಯಿಲ್ಲ ಮನಕೆ ಜಯವಿಲ್ಲ
ಹೊನ್ನು ಚಿನ್ನಗಳಿಲ್ಲ ಒಲಿಸಿಕೊಂಬುವರಿಲ್ಲ
ಇನ್ನಿಲ್ಲಿ ತರವಲ್ಲ ಇಂದಿರೇಶನು ಬಲ್ಲ || ೧ ||

ದೇಶ ಪರಿಚಯವಿಲ್ಲ ದೇಹದೊಳು ಬಲವಿಲ್ಲ
ವಾಸಿ ಪಂಥಗಳೆಂಬೊ ಒಲುಮೆಯೆನಗಿಲ್ಲ
ಬೇಸರ ಕಳೆವರಿಲ್ಲ ಬೇರೆ ಹಿತ ಜನರಿಲ್ಲ
ವಾಸುದೇವನೆ ಬಲ್ಲ ಈ ರಾಜ್ಯವೆಲ್ಲ || ೨ ||

ಕರೆದು ಕೊಡುವವರಿಲ್ಲ ಕರುಣೆ ತೋರುವರಿಲ್ಲ
ಕಮಲಾಕ್ಷನಲ್ಲದೆ ಗತಿಯೊಬ್ಬರಿಲ್ಲ
ಕನಸಿನಲಿ ಕಳುವಿಲ್ಲ ಮನಸಿನಲಿ ದೃಢವಿಲ್ಲ
ವನಜಾಕ್ಷ ಪುರಂದರ ವಿಠಲ ತಾ ಬಲ್ಲ || ೩ ||

**Classification:** Keerthane
**Ankita:** Purandara Vittala
**Location:** NA
**Category:** Artha Bhava

**Sub-Category:** rajya, Krishna, huttu, vairagya, kula, arasa, mana, jaya, bangara, olume, deha, karuna, kanasu,

**Pravachana:** NA

**Explanation:** NA